**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶ್ರೀರಂಗಪಟ್ಟಣ.**

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ **: 12/2025**

**ಚಾ.ಸಾ. :-1**
**ಪ್ರಾ.ಸಾ. :-1**

| | |
|---|---|
| ಹೆಸರು | : ಮಂಜು.ಜಿ.ಎಂ. |
| ತಂದೆಯ ಹೆಸರು | : ಮರೀಗೌಡ.ಕೆ. |
| ವಯಸ್ಸು | : 47 ವರ್ಷ |
| ಉದ್ಯೋಗ | : ಚಾಲಕ |
| ವಾಸಸ್ಥಳ | : ಗೆಂಡೆಹೊಸಹಳ್ಳಿ ಗ್ರಾಮ |

---

ಪ್ರಮಾಣೀಕರಿಸಲಾದ ದಿನಾಂಕಃ**- 19.01.2026**

<u>ಮುಖ್ಯ ವಿಚಾರಣೆ **:** ಮಾನ್ಯ ಸ**.**ಸ**.**ಅ**.**ರವರಿಂದ **:**</u>

ಮೃತ ರವಿರವರು ನಾನು ಚಾಲಕನಾಗಿ ಕೆಲಸ ಮಾಡುತ್ತಿದ್ದ ಲಾರಿಯಲ್ಲಿ ಲೋಡರ್ ಆಗಿ ಕೆಲಸ ಮಾಡುತ್ತಿದ್ದರು. ಚಾ.ಸಾ-2 ರವರು ಸಹ ನಮ್ಮ ಲಾರಿಯಲ್ಲಿ ಲೋಡರ್ ಆಗಿ ಕೆಲಸ ಮಾಡುತ್ತಿದ್ದರು. ದಿನಾಂಕಃ 17.02.2025 ರಂದು ಕಾಳೇನಹಳ್ಳಿಯಲ್ಲಿರುವ ಅಫ್ಜಲ್ ರವರ ಕೋರೆಯಿಂದ ಬೋಡರ್ಸ್ ಕಲ್ಲುಗಳನ್ನು ತುಂಬಿಕೊಂಡು ಮೈಸೂರಿಗೆ ಹೋಗುತ್ತಿದ್ದೆವು. ರಸ್ತೆ ಮಧ್ಯೆದಲ್ಲಿ ನಮ್ಮ ಲಾರಿಯ ಫ್ಯಾನ್ ಬ್ಲೇಡ್ ತುಂಡಾಗಿದ್ದು ಆ ಸಮಯದಲ್ಲಿ ಲಾರಿಯನ್ನು ನಿಲ್ಲಿಸಿ, 4 ಬದಿಯ ಇಂಡಿಕೇಟರ್ ಗಳನ್ನು ಆನ್ ಮಾಡಿರುತ್ತೇನೆ. ಸುಮಾರು 10 ಅಡಿ ದೂರದಲ್ಲಿ ಮೃತ ರವಿಯವರನ್ನು ನಮ್ಮ ಲಾರಿಯ ಹಿಂಭಾಗದಲ್ಲಿ ನಿಲ್ಲಿಸಿ ಬರುತ್ತಿದ್ದ ವಾಹನಗಳಿಗೆ ಸೂಚನೆ ನೀಡುವಂತೆ ಹೇಳಿದ್ದೆವು. ಚಾ.ಸಾ-2 ರವರು ಮತ್ತು ನಾನು ಲಾರಿಯ ಮುಂಭಾಗದಲ್ಲಿ ಕೆಟ್ಟು ಹೋಗಿದ್ದ ಫ್ಯಾನನ್ನು ರಿಪೇರಿ ಮಾಡುತ್ತಿದ್ದೆವು. ಆ ಸಮಯದಲ್ಲಿ ಹಿಂದಿನಿಂದ ವೇಗವಾಗಿ ಬಂದಂತಹ ಇನ್ನೊಂದು ಲಾರಿ ನಮ್ಮ ಲಾರಿಗೆ ಗುದ್ದಿರುತ್ತದೆ. ಸದರಿ ಲಾರಿ ಮೊದಲು ರವಿರವರಿಗೆ

ಗುದ್ದಿ ನಂತರ ನಮ್ಮ ಲಾರಿಗೂ ಗುದ್ದಿರುತ್ತದೆ. ರವಿರವರು ಮೊಬೈಲ್‌ನಲ್ಲಿ ಟಾರ್ಚ್ ಹಾಕಿಕೊಂಡು ಹಿಂಭಾಗದಲ್ಲಿ ಬರುತ್ತಿದ್ದ ವಾಹನಗಳಿಗೆ ಸೂಚನೆ ನೀಡುತ್ತಿದ್ದರು. ಅಪಘಾತವಾದ ನಂತರ ನಮ್ಮ ಲಾರಿ ಮುಂದೆ ಬಂದು ಚಾ.ಸಾ-2 ರವರಿಗೂ ಗುದ್ದಿ ಗಾಯಪಡಿಸಿರುತ್ತದೆ. ಅಪಘಾತಪಡಿಸಿದ ಲಾರಿಯ ಎಡಭಾಗ ನಮ್ಮ ಲಾರಿಯ ಹಿಂಭಾಗದ ಬಲಭಾಗಕ್ಕೆ ಡಿಕ್ಕಿಪಡಿಸಿರುತ್ತದೆ. ಸದರಿ ಲಾರಿಯ ಒಳಭಾಗದಲ್ಲಿ ಕುಳಿತಿದ್ದ ಇನ್ನೊಬ್ಬ ವ್ಯಕ್ತಿಯಾದ ಚಾ.ಸಾ-3 ರವರಿಗೆ ಕಾಲು ಮುರಿದಿರುತ್ತದೆ.

ನಮ್ಮ ಲಾರಿಯನ್ನು ರಸ್ತೆಯ ಎಡಭಾಗದಲ್ಲಿ ನಿಲ್ಲಿಸಿದ್ದು, ಆ ರಸ್ತೆಯಲ್ಲಿ ಒಂದೇ ಸಮಯದಲ್ಲಿ 3 ವಾಹನಗಳು ಹೋಗುವಷ್ಟು ಜಾಗ ಇತ್ತು. ಆ ಸಮಯದಲ್ಲಿ ರಸ್ತೆಯಲ್ಲಿ ವಾಹನ ಸಂಚಾರ ಕಡಿಮೆ ಇತ್ತು.

ನಂತರ ವಾಹನದ ಹಿಂಭಾಗಕ್ಕೆ ಹೋಗಿ ನೋಡಿದಾಗ ರವಿರವರಿಗೆ ತೀವ್ರ ಗಾಯಗಳಾಗಿದ್ದು, ಅವರನ್ನು ಆ್ಯಂಬುಲೆನ್ಸ್ ಮೂಲಕ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿರುತ್ತೇವೆ. ನಂತರ ಹೆಚ್ಚಿನ ಚಿಕಿತ್ಸೆಗೆ ರವಿರವರನ್ನು ಮೈಸೂರಿನ ಆಸ್ಪತ್ರೆಗೆ ದಾಖಲು ಮಾಡಿರುತ್ತೇವೆ. ಅದೇ ದಿನ ಅವರು ಮೃತಪಟ್ಟಿರುತ್ತಾರೆ.

ನಂತರ ಅಪಘಾತದ ಬಗ್ಗೆ ಪೊಲೀಸರಿಗೆ ದೂರು ನೀಡಿರುತ್ತೇನೆ. ಸಾಕ್ಷಿಯ ಸಹಿ ಇರುವ ಒಂದು ದಾಖಲೆಯು ದೂರಾಗಿದ್ದು ಅದನ್ನು ಈಗ ನಿಪಿ-1 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರ್ತಿಸಲಾಯಿತು.

ಸಾಕ್ಷಿಯ ಸಹಿ ಇರುವ ಇನ್ನೊಂದು ದಾಖಲೆಯು ಸ್ಥಳ ಮಹಜರ್ ಆಗಿದ್ದು, ಅದನ್ನು ಈಗ ನಿಪಿ-2 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರ್ತಿಸಲಾಯಿತು.

ಸಾಕ್ಷಿಯು ವಾಹನಗಳ 6 ಫೋಟೋಗಳನ್ನು ನೋಡಿ ಗುರ್ತಿಸಿದ್ದು ಅವುಗಳನ್ನು ಈಗ ಒಟ್ಟಾಗಿ ನಿಪಿ-3 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :**

ಸದರಿ ರಸ್ತೆ ಎಕ್ಸ್‌ಪ್ರೆಸ್ ಹೆದ್ದಾರಿಯಾಗಿರುತ್ತದೆ. ನಮ್ಮ ಲಾರಿ ಕೆಟ್ಟಾಗ ನಾವು ಹೆದ್ದಾರಿಯ ಟೋಲ್ ಫ್ರೀ ನಂಬರ್ ಗೆ ಕರೆ ಮಾಡಿಲ್ಲ. ಸದರಿ ಹೆದ್ದಾರಿಯಲ್ಲಿ ವಾಹನಗಳನ್ನು ನಿಲ್ಲಿಸಬಾರದು ಹಾಗೂ ವಾಹನದಿಂದ ಕೆಳಗಿಳಿದು ರಸ್ತೆಯಲ್ಲಿ ಓಡಾಡಬಾರದು ಎಂದು ಸೂಚನಾ ಫಲಕಗಳನ್ನು ಅಳವಡಿಸಿರುತ್ತಾರೆ ಎಂದರೆ ಸರಿ.

ನಮ್ಮ ಲಾರಿಯ ಫ್ಯಾನ್ ಬೆಲ್ಟ್ ಕಿತ್ತುಹೋಗಿರುತ್ತದೆ ಎಂದು ತೋರಿಸಲು ಪೊಲೀಸರಿಗೆ ಯಾವುದೇ ಸಾಕ್ಷಿ ನೀಡಿರುವುದಿಲ್ಲ. ಮೃತ ರವಿರವರು ಆ ದಿನ ಮದ್ಯಪಾನ ಮಾಡಿದ್ದರು ಎಂದರೆ ಸುಳ್ಳು. ಮೃತ ರವಿರವರು ಮದ್ಯಪಾನ ಮಾಡಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತ ಸಮಯದಲ್ಲಿ ನಾನು ಮತ್ತು ಚಾ.ಸಾ-2 ಲಾರಿಯ ಮುಂಭಾಗದಲ್ಲಿ ನಿಂತಿದ್ದೆವು. ನಾವು ಮುಂಭಾಗದಲ್ಲಿ ನಿಂತಿದ್ದ ಕಾರಣ ಹಿಂಭಾಗದಲ್ಲಿ ಬಂದಂತಹ ಲಾರಿಯು ಹೇಗೆ ಬಂದಿರುತ್ತದೆ ಎಂದು ನಾನು ನೇರವಾಗಿ ನೋಡಿಲ್ಲ ಎಂದರೆ ಸರಿ. ಅಪಘಾತವಾದಾಗ ನನಗೆ ಯಾವುದೇ ಗಾಯಗಳಾಗಿರುವುದಿಲ್ಲ.

ಆರೋಪಿ ಚಾಲನೆ ಮಾಡುತ್ತಿದ್ದ ಲಾರಿಯ ತುಂಬಾ ಸರಕು ಇತ್ತು ಎಂದರೆ ಸರಿ. ಸರಕು ಇದ್ದಂತಹ ಸಮಯದಲ್ಲಿ ವೇಗವಾಗಿ ಲಾರಿಯನ್ನು ಚಾಲನೆ ಮಾಡಲು ಆಗುವುದಿಲ್ಲ ಎಂದರೆ ಸಾಕ್ಷಿ 60 ಕಿ.ಮೀ.ವೇಗದವರೆಗೂ ಓಡಿಸಬಹುದು ಎನ್ನುತ್ತಾರೆ.

ಪೊಲೀಸರು ರವಿರವರ ಮೊಬೈಲನ್ನು ಅಮಾನತ್ತುಪಡಿಸಿಕೊಂಡಿಲ್ಲ. ದೂರನ್ನು ಯಾರು ಎಲ್ಲಿ ಟೈಪ್ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ಬೇರೆಯವರು ಟೈಪ್ ಮಾಡಿದ ದೂರಿಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿ ನಾನು ದೂರನ್ನು ಹೇಳಿ ಬರೆಯಿಸಿರುವುದಿಲ್ಲ, ಮಹಜರ್ ಮಾಡಿದ ನಂತರ ದೂರನ್ನು ಟೈಪ್ ಮಾಡಿರುತ್ತಾರೆ ಎನ್ನುತ್ತಾರೆ. ಮಹಜರಿನಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಮಹಜರಿಗೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಅಪಘಾತಕ್ಕೂ, ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ರವಿರವರು ಮದ್ಯಪಾನ ಮಾಡಿದ್ದು ರಸ್ತೆಗೆ ಅಡ್ಡಬಂದ ಕಾರಣ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ನಮ್ಮ ಲಾರಿಗೆ ಯಾವುದೇ ಇಂಡಿಕೇಟರ್ ಗಳನ್ನು ಹಾಕಿರಲಿಲ್ಲ

ಎಂದರೆ ಸರಿಯಲ್ಲ. ರವಿರವರು ನಾನು ಹೇಳಿದಂತೆ ಮೊಬೈಲ್ ಟಾರ್ಚ್ ನಿಂದ ಯಾವುದೇ ಸೂಚನೆ ಕೊಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ರವಿರವರ ಅಜಾಗರೂಕತೆಯಿಂದ ಸದರಿ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ.

ಮೃತರ ಕುಟುಂಬಕ್ಕೆ ವಿಮೆ ಪರಿಹಾರ ಕೊಡಿಸುವ ಸಲುವಾಗಿ ಸುಳ್ಳು ದೂರು ನೀಡಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ **:** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

ಪ್ರಧಾನ ಹಿರಿಯ ಸಿಜೆ ಮತ್ತು
ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.

**ಸಾಕ್ಷಿದಾರರ ಸಹಿ.**